# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 909 |
| ಸದಸ್ಯರ ಹೆಸರು | ಶ್ರೀ ಎನ್.ರವಿಕುಮಾರ್ |
| ಉತ್ತರಿಸುವ ದಿನಾಂಕ | 24-07-2024 |
| ಉತ್ತರಿಸುವವರು | ಸಾರಿಗೆ ಮತ್ತು ಮುಜರಾಯಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | 1939ರಲ್ಲಿ ಶ್ರೀಮತಿ ದ್ವಾರಕಾಬಾಯಿ ವೇದಾಂತಂ ರವರು 1198-34 ಎಕರೆ ಜಾಗವನ್ನು ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವುದರ ಕುರಿತು ಸರ್ಕಾರದ ನಿಲುವೇನು; ಈ ಜಾಗವನ್ನು ಮುಜರಾಯಿ ಇಲಾಖೆಯ ದಾಖಲೆಗಳಲ್ಲಿ ನಮೂದು ಆಗದಿರಲು ಕಾರಣಕರ್ತರು ಯಾರು ; | ಬೆಂಗಳೂರಿನ ಮಲ್ಲೇಶ್ವರಂ ನಿವಾಸಿಯಾದ ಶ್ರೀಮತಿ ದ್ವಾರಕಾಬಾಯಿ ವೇದಾಂತಂ ರವರು ಈ ಹಿಂದಿನ ಮಾಗಡಿ ತಾಲ್ಲೂಕು, ಹಾಲಿ ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಸೇರಿದ ತಾವರೆಕೆರೆ ಹೋಬಳಿಯ ಬ್ಯಾಲಾಳು, ಚೋಳನಾಯಕನಹಳ್ಳಿ, ಪೆದ್ದನಪಾಳ್ಯ, ದೊಡ್ಡಮಾರನಹಳ್ಳಿ, ಮತ್ತು ಕಾಡುಕರೇನಹಳ್ಳಿ (ಕುರುಬರಹಳ್ಳಿ) ಈ ಗ್ರಾಮಗಳಿಗೆ ಸೇರಿದ ಒಟ್ಟು 1198-34 ವಿಸ್ತೀರ್ಣದ ಪೈಕಿ ಬ್ಯಾಲಾಳು ಮತ್ತು ಕಾಡುಕರೇನಹಳ್ಳಿ (ಕುರುಬರಹಳ್ಳಿ) ಗ್ರಾಮದಲ್ಲಿ ಖರಾಬು ಜಮೀನುಗಳನ್ನು ಒಳಗೊಂಡು ದತ್ತಿ ರೂಪದಲ್ಲಿ 1939 ರಲ್ಲಿ ಸರ್ಕಾರದ 'ಮುಜರಾಯಿ ಕಮೀಷನರ್' ರವರ ಹೆಸರಿಗೆ ದಾನವಾಗಿ ನೀಡಿದ್ದು, ಈ ಬಗ್ಗೆ ಅಂದಿನ ಮೈಸೂರು ಮಹಾರಾಜರ ಸರ್ಕಾರದ ಆದೇಶ ಸಂಖ್ಯೆ:755-9.MUZ.313-38-3, ದಿನಾಂಕ:11/13-04-1939ರನ್ವಯ ಒಂದು ಆದೇಶವನ್ನು ಹೊರಡಿಸುತ್ತಾರೆ.<br><br>ದಾನಪತ್ರದ ಸಂಖ್ಯೆ: 1957/1938-39 ದಿ:15-04-1339 ವ್ಯಾಲ್ಯೂಮ್ 540 ರನ್ವಯ ದಾನವಾಗಿ ನೀಡಿರುವ ಗ್ರಾಮವಾರು ಜಮೀನಿನ ವಿವರ ಈ ಕೆಳಕಂಡಂತೆ ಇದೆ. |

| ಕ್ರ. ಸಂ. | ಗ್ರಾಮ | ವಿಸ್ತೀರ್ಣ | | | |
|---|---|---|---|---|---|
| | | ಒಟ್ಟು | ಖರಾಬು | ಖುಷ್ಕಿ | ತರಿ |
| 1 | ಬ್ಯಾಲಾಳು | 195-00 | 100-00 | 95-00 | - |
| 2 | ಚೋಳನಾಯಕನಹಳ್ಳಿ | 287-09 | - | 287-04 | 0-05 |
| 3 | ದೊಡ್ಡಮಾರನಹಳ್ಳಿ | 88-36 | - | 88-36 | - |
| 4 | ಕಾಡುಕರೇನಹಳ್ಳಿ (ಕುರುಬರಹಳ್ಳಿ) | 361-03 | 200-00 | 143-29 | 17-14 |
| 5 | ಪೆದ್ದನಪಾಳ್ಯ | 266-26 | - | 266-26 | - |
| ಎಲ್ಲಾ ಗ್ರಾಮದ ಒಟ್ಟು ವಿಸ್ತೀರ್ಣ | | **1198-34** | **300-00** | **881-15** | **17-19** |

ಮೇಲ್ಕಂಡ ಗ್ರಾಮಗಳಲ್ಲಿನ ಶ್ರೀಮತಿ ದ್ವಾರಕಾಬಾಯಿ ವೇದಾಂತಂ ರವರಿಗೆ ಸೇರಿದ ವಿವಿಧ ಸರ್ವೆ ನಂಬರ್‌ಗಳಲ್ಲಿನ ಆಸ್ತಿಗಳನ್ನು, ಸರ್ಕಾರದ ಆದೇಶ ಸಂಖ್ಯೆ:2170-4 MUZ 383-39-4 ದಿನಾಂಕ:26-02-1941 ರನ್ವಯ ಸದರಿ ಆಸ್ತಿಗಳಿಂದ ಬರುವ ನಿವ್ವಳ ಆದಾಯವನ್ನು ಈ ಕೆಳಕಂಡ ಉದ್ದೇಶಗಳಿಗೆ ಉಪಯೋಗಿಸಬೇಕೆಂದು ಮೇಲಿನ ಆದೇಶಗಳಿಂದ ಕಂಡು ಬಂದಿರುತ್ತದೆ.

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | | **ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು, ಶ್ರೀ ರಂಗನಾಥಸ್ವಾಮಿ ದೇವಾಲಯದಲ್ಲಿ ತುಲಾಮಾಸದಲ್ಲಿ ನಡೆಯುವ ಪೂಜಾ ಕೈಂಕರ್ಯಗಳ ಸಂದರ್ಭದಲ್ಲಿ ಆಗಮಿಸುವ ಭಕ್ತಾದಿಗಳಿಗೆ ಅನ್ನಸಂತರ್ಪಣೆಗಾಗಿ ಈ ಆಸ್ತಿಗಳ ಒಟ್ಟು ಆದಾಯದ 1/3 ಭಾಗವನ್ನು ಉಪಯೋಗಿಸತಕ್ಕದ್ದು.**<br><br>**ಉಳಿದ ಹಣವನ್ನು ವೈದ್ಯಕೀಯ ಶಿಕ್ಷಣ ಮಾಡುವ ಮಹಿಳಾ ವಿದ್ಯಾರ್ಥಿಗಳಿಗೆ ಮತ್ತು ಆರೋಗ್ಯದ ಮಾಹಿತಿಗಳನ್ನು ಪಸರಿಸುವ ಬಗ್ಗೆ ಮತ್ತು ಶುಚಿತ್ವದ ಅಭ್ಯಾಸವನ್ನು ಬೆಳೆಸುವ ಸಂಬಂಧ ಅಂತಹ ವಿದ್ಯಾರ್ಥಿಗಳಿಗೆ ಶಿಷ್ಯವೇತನವನ್ನು ಕೊಡತಕ್ಕದ್ದು.**<br><br>ದ್ವಾರಕಬಾಯಿ ವೇದಾಂತಂ ರವರು ದಾನವಾಗಿ ನೀಡಿರುವ ಜಮೀನುಗಳನ್ನು ನಿಯಮಬಾಹಿರವಾಗಿ ಒತ್ತುವರಿ / ಪರಭಾರೆ / ಭೂ ಮಂಜೂರಾತಿ, ಭೂ ಸ್ವಾಧೀನದ ಮೂಲಕ ಸಂಬಂಧಪಟ್ಟ ಪ್ರಾಧಿಕಾರಗಳು ಮಂಜೂರಾತಿ ನೀಡಿರುವುದನ್ನು ಸರ್ಕಾರದ ವಶಕ್ಕೆ ಪಡೆಯಲು ಸರ್ಕಾರದ ಆದೇಶ ಸಂಖ್ಯೆ:ಕಂ.ಇ.98.ಮುಆಬಿ 2021, ದಿನಾಂಕ: 28.09.2021& ದಿನಾಂಕ: 11.11.2021 ರನ್ವಯ ಧಾರ್ಮಿಕ ದತ್ತಿ ಆಯುಕ್ತರು, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಒಟ್ಟು 13 ಜನ ಅಧಿಕಾರಿಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಹಲವಾರು ಸಭೆಗಳನ್ನು ನಡೆಸಿ ದೇವಾಲಯಕ್ಕೆ ಸೇರಿದ ಜಮೀನಿನ ಅನಧಿಕೃತ ಒತ್ತುವರಿದಾರರನ್ನು ಗುರುತಿಸಿ ಒತ್ತುವರಿಯನ್ನು ತೆರವುಗೊಳಿಸಲು ಹಾಗೂ ಪ್ರಸ್ತಾಪಿತ ಸರ್ವೆ ನಂಬರ್‌ಗಳ ಸ್ವತ್ತುಗಳನ್ನು ಜಂಟಿಯಾಗಿ ಕಂದಾಯ ಅಧಿಕಾರಿಗಳು ಮತ್ತು ಭೂ ದಾಖಲೆಗಳ ಸಹಾಯಕ ನಿರ್ದೇಶಕರವರು ಸರ್ವೆ ಕಾರ್ಯ ನಡೆಸಿ ಖಾಲಿ ಇರುವ ಜಾಗವನ್ನು ಮುಜರಾಯಿ ಇಲಾಖೆ ವಶಕ್ಕೆ ಪಡೆಯಲು ಕ್ರಮ ವಹಿಸಲಾಗುತ್ತಿದೆ.<br><br>ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷತೆಯಲ್ಲಿ ದಿನಾಂಕ:11.11.2021 & 18.11.2021ರಂದು ನಡೆದ ಧಾರ್ಮಿಕ ದತ್ತಿ ಆಯುಕ್ತರ ಅಧ್ಯಕ್ಷರ ಸಮಿತಿ ಸಭೆಯಲ್ಲಿ ತಹಸೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ರವರು ಸಲ್ಲಿಸಿದ ಕಂದಾಯ ದಾಖಲೆಗಳಲ್ಲಿ ಭೂಮಿಯ ತಂತ್ರಾಂಶದಂತೆ ಒಟ್ಟು 155-22 ಎ/ಗು ವಿಸ್ತೀರ್ಣದ ಜಮೀನು ಶ್ರೀ ರಂಗಪಟ್ಟಣದ ಶ್ರೀ ರಂಗನಾಥಸ್ವಾಮಿ ದೇವರ ಹೆಸರಿನಲ್ಲಿ ಪಹಣಿ ಇರುವುದಾಗಿ ಕಂಡು ಬಂದಿದ್ದು, ಸದರಿ ದಾಖಲೆಗಳಲ್ಲಿ ಶ್ರೀ ರಂಗನಾಥಸ್ವಾಮಿ ದೇವರ ಹೆಸರಿನ ಬದಲಾಗಿ ಆಯುಕ್ತರು, ಧಾರ್ಮಿಕ ದತ್ತಿ ಇಲಾಖೆ ಇವರ ಹೆಸರನ್ನು ಆರ್.ಟಿ.ಸಿಯಲ್ಲಿ ಮತ್ತು ಭೂ ದಾಖಲೆಗಳಲ್ಲಿ ದಾಖಲಿಸಲು ತಹಸೀಲ್ದಾರ್, ದಕ್ಷಿಣ ತಾಲ್ಲೂಕು ರವರಿಗೆ ಸೂಚನೆ ನೀಡಲಾಗಿರುತ್ತದೆ. |

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td></td><td></td><td>
<table>
<tr><th>ಕ್ರ. ಸಂ</th><th>ಗ್ರಾಮ</th><th>ಸರ್ವೆ ನಂ</th><th>ಶ್ರೀ ರಂಗನಾಥಸ್ವಾಮಿ ಎಂದು ಹೆಸರಿನಲ್ಲಿನ ವಿಸ್ತೀರ್ಣ ಎ/ಗು</th></tr>
<tr><td>1.</td><td>ಚೋಳನಾಯಕನಹಳ್ಳಿ</td><td>57</td><td>32-12</td></tr>
<tr><td>2.</td><td>ಚೋಳನಾಯಕನಹಳ್ಳಿ</td><td>58</td><td>1-13</td></tr>
<tr><td>3.</td><td>ಚೋಳನಾಯಕನಹಳ್ಳಿ</td><td>59</td><td>59-25</td></tr>
<tr><td>4.</td><td>ಚೋಳನಾಯಕನಹಳ್ಳಿ</td><td>60</td><td>0-17</td></tr>
<tr><td>5.</td><td>ಚೋಳನಾಯಕನಹಳ್ಳಿ</td><td>61</td><td>26-36</td></tr>
<tr><td>6.</td><td>ಚೋಳನಾಯಕನಹಳ್ಳಿ</td><td>62</td><td>4-32</td></tr>
<tr><td>7.</td><td>ಚೋಳನಾಯಕನಹಳ್ಳಿ</td><td>63</td><td>30-07</td></tr>
<tr><td></td><td>ಒಟ್ಟು</td><td></td><td>155-22</td></tr>
</table>
ಬ್ಯಾಲಾಳು, ಚೋಳನಾಯಕನಹಳ್ಳಿ, ಪೆದ್ದನಪಾಳ್ಯ, ದೊಡ್ಡಮಾರನಹಳ್ಳಿ ಮತ್ತು ಕುರುಬರಹಳ್ಳಿಗ್ರಾಮಗಳ ಸಂ.ನಂಬರ್‌ಗಳಿಗೆ ಸಂಬಂಧಿಸಿದಂತೆ ಅನಧಿಕೃತವಾಗಿ ಒತ್ತುವರಿಯಾಗಿರುವ ಬಗ್ಗೆ ಕರ್ನಾಟಕ ಭೂಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದಲ್ಲಿ 44/16-17, 46/16-17, 47/16-17, 45/16-17,15/16-17 ರಂತೆ ಸ್ವಯಂ ಪ್ರಕರಣಗಳು ದಾಖಲಾಗಿರುವುದರಿಂದ ಹಾಗೂ ಮಾನ್ಯ ಉಚ್ಚ ನ್ಯಾಯಾಲಯದಲ್ಲಿಯೂ ಸಹ ಡಬ್ಲ್ಯೂ.ಪಿ.13564/2019 ರಂತೆ ಪ್ರಕರಣ ದಾಖಲಾಗಿರುವುದರಿಂದ ಸದರಿ ಪ್ರಕರಣಗಳೂ ವಿಚಾರಣಾ ಹಂತದಲ್ಲಿರುತ್ತವೆ. ಸದರಿ ಪ್ರಕರಣಗಳು ಇತ್ಯರ್ಥವಾದ ನಂತರ ನ್ಯಾಯಾಲಯದ ಆದೇಶದಂತೆ ಕ್ರಮ ಕೈಗೊಳ್ಳಲಾಗುತ್ತದೆ.
</td></tr>
<tr><td>ಆ)</td><td>ಯಾವುದೇ ಸ್ಪಷ್ಟ ಉದ್ದೇಶಕ್ಕಾಗಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಾಗವನ್ನು ಮುಜರಾಯಿ ಇಲಾಖೆಯ ಸ್ವತ್ತಾಗಿದ್ದು ಸದರಿ ಜಾಗವನ್ನು ಕಂದಾಯ ಅಧಿಕಾರಿಗಳು ಯಾವ ನಿಯಮದ ಅನ್ವಯ ಖಾಸಗಿ ವ್ಯಕ್ತಿಗಳಿಗೆ ಪರಭಾರೆ ಮಾಡಿದ್ದಾರೆ; ಈ ಕುರಿತು ಇರುವ ನಿಯಮವೇನು; ಈ ಅಕ್ರಮವನ್ನು ಎಸಗಿದ</td><td>ಶ್ರೀ ರಂಗನಾಥಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಮೀನನ್ನು ಸರ್ಕಾರದ ಆದೇಶದಂತೆ ಮಂಚನಬೆಲೆ ಜಲಾಶಯಕ್ಕೆ ಜಮೀನು ಕಳೆದುಕೊಂಡ ನಿರಾಶ್ರಿತರಿಗೆ ಬದಲಿ ಜಮೀನನ್ನು ನೀಡುವ ಉದ್ದೇಶಕ್ಕಾಗಿ ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ 1964 ರಡಿ ಮಂಜೂರು ಮಾಡಲಾಗಿರುತ್ತದೆ ಹಾಗೂ ಇನಾಂ ಅಬಾಲಿಷನ್ ಕಾಯ್ದೆ /ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ಕಾಯ್ದೆಗಳನ್ವಯ ಮಂಜೂರು ಮಾಡಲಾಗಿರುತ್ತದೆ.</td></tr>
</table>

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| | ಅಧಿಕಾರಿಗಳ ಮೇಲೆ ಯಾವಾಗ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ : | |
| ಇ) | ಮುಜರಾಯಿ ಇಲಾಖೆಯ ಸ್ವತ್ತುಗಳನ್ನು ಕಂದಾಯ ಇಲಾಖೆಯು ಮುಜರಾಯಿ ಇಲಾಖೆಯ ಅನುಮತಿ ಒಪ್ಪಿಗೆ ಇಲ್ಲದೇ ಇತರರಿಗೆ ಯಾವ ಆದೇಶದ ಅನ್ವಯ ಹಂಚಿಕೆ ಮಾಡಿದೆ; ಈ ಅಕ್ರಮದಲ್ಲಿ ಭಾಗಿಯಾದವರು ಯಾರು; | ಶ್ರೀ ರಂಗನಾಥ ಸ್ವಾಮಿ ದೇವಸ್ಥಾನಕ್ಕೆ ದಾನವಾಗಿ ನೀಡಿರುವ ಜಮೀನನ್ನು ಸರ್ಕಾರದ ಆದೇಶದ ಸಂಖ್ಯೆ:ಆರ್.ಡಿ 238 ಎಲ್.ಜಿ.ಬಿ 79 ದಿನಾಂಕ:25/06/1982 ರ ಆದೇಶದಂತೆ ತಹಶೀಲ್ದಾರ್ ಮಾಗಡಿ ತಾಲ್ಲೂಕುರವರ ಅಧಿಕೃತ ಜ್ಞಾಪನ ಪತ್ರದ ಆದೇಶದ ಸಂಖ್ಯೆ:ಎಲ್.ಎನ್.ಡಿ/ಸಿಆರ್/53/82-83 ದಿನಾಂಕ: 13/07/1982 ರಂತೆ ಮತ್ತು ಜಿಲ್ಲಾಧಿಕಾರಿಗಳ ಅಧಿಕೃತ ಜ್ಞಾಪನ ಪತ್ರದ ಸಂಖ್ಯೆ:ಎಲ್.ಎನ್.ಡಿ/ಎಸ್‌ಆರ್/466/1986-87 ದಿನಾಂಕ:27/05/1989 ರಂತೆ ಮಂಚನ ಬೆಲೆ ಜಲಾಶಯಕ್ಕೆ ಜಮೀನು ಕಳೆದುಕೊಂಡ 79 ನಿರಾಶ್ರಿತರಿಗೆ ಚೋಳನಾಯಕನಹಳ್ಳಿ ಗ್ರಾಮದ ಸ.ನಂ 57 ರಿಂದ 63 ರವರೆಗೆ ತಲಾ 2-20 ಎ/ಗುಂಟೆಯಂತೆ ಬದಲಿ ಜಮೀನನ್ನು ಮಂಜೂರು ಮಾಡಲಾಗಿರುತ್ತದೆ. |
| ಈ) | 1198-34ಎಕರೆ ಜಾಗವನ್ನು ಯಾವ ಯಾವ ವರ್ಷದಲ್ಲಿ ಪರಬಾರೆ ಮಾಡಲಾಯಿತು; ಈ ಅವಧಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ತಹಶೀಲ್ದಾರ್. ಜಿಲ್ಲಾಧಿಕಾರಿಗಳ ಮಾಹಿತಿ ಮುಜರಾಯಿ ಇಲಾಖೆಯಲ್ಲಿದೆಯೇ; ಅಥವಾ ಮುಜರಾಯಿ ಇಲಾಖೆಯ ಅಧಿಕಾರಿಗಳು ಈ ಅಕ್ರಮದಲ್ಲಿ ಶಾಮೀಲಾಗಿದ್ದಾರೆಯೇ; ಈ ಎಲ್ಲಾ ವಿಷಯಗಳ ಕುರಿತು ತನಿಖೆ ನಡೆಸಲು ಕ್ರಿಮಿನಲ್ ಮೊಕದ್ದಮೆಯನ್ನು ಅಧಿಕಾರಿಗಳ ವಿರುದ್ಧ ದಾಖಲಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ: | ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ದಿ-01/03/1974 ರಿಂದ ಜಾರಿಗೆ ಬಂದ ನಂತರ ಮತ್ತು ಕರ್ನಾಟಕ ಭೂ ಮಂಜೂರಾತಿ ಅಧಿನಿಯಮ 1964 ರಡಿ /ಇನಾಂ ಅಬಾಲಿಷನ್ ಕಾಯ್ದೆಗಳನ್ವಯ ಪರಭಾರೆ ಮಾಡಿರುವುದು ಕಂಡು ಬಂದಿರುತ್ತದೆ.<br><br>ದ್ವಾರಕಬಾಯಿ ವೇದಾಂತಂ ರವರು ದಾನವಾಗಿ ನೀಡಿರುವ ಜಮೀನುಗಳನ್ನು ನಿಯಮಬಾಹಿರವಾಗಿ ಒತ್ತುವರಿ / ಪರಭಾರೆ / ಭೂ ಮಂಜೂರಾತಿ, ಭೂ ಸ್ವಾಧೀನದ ಮೂಲಕ ಸಂಬಂಧಪಟ್ಟ ಪ್ರಾಧಿಕಾರಗಳು ಮಂಜೂರಾತಿ ನೀಡಿರುವುದನ್ನು ಸರ್ಕಾರದ ವಶಕ್ಕೆ ಪಡೆಯಲು ಸರ್ಕಾರದ ಆದೇಶ ಸಂಖ್ಯೆ:ಕಂ.ಇ.98.ಮುಆಬಿ 2021, ದಿನಾಂಕ: 28.09.2021 & ದಿನಾಂಕ: 11.11.2021 ರನ್ವಯ ಧಾರ್ಮಿಕ ದತ್ತಿ ಆಯುಕ್ತರು, ಬೆಂಗಳೂರು ರವರ ಅಧ್ಯಕ್ಷತೆಯಲ್ಲಿ ಒಟ್ಟು 13 ಜನ ಅಧಿಕಾರಿಗಳನ್ನೊಳಗೊಂಡಂತೆ ಒಂದು ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಹಲವಾರು ಸಭೆಗಳನ್ನು ನಡೆಸಿ ದೇವಾಲಯಕ್ಕೆ ಸೇರಿದ ಜಮೀನಿನ ಅನಧಿಕೃತ ಒತ್ತುವರಿದಾರರನ್ನು ಗುರುತಿಸಿ ಒತ್ತುವರಿಯನ್ನು ತೆರವುಗೊಳಿಸಲು ಹಾಗೂ ಸದರಿ ಜಮೀನನ್ನು ಇಲಾಖೆಯ ವಶಕ್ಕೆ ಪಡೆಯುವ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. |
| ಉ) | ಅಧಿಕಾರಿಗಳ ಸಹಾಯ ಇಲ್ಲದೆ ಮುಜರಾಯಿ ಇಲಾಖೆಯ ಜಮೀನುಗಳನ್ನು ಖಾಸಗಿಯವರಿಗೆ ದಾಖಲೆ ಮಾಡಿಕೊಡಲು ಹೇಗೆ ಸಾಧ್ಯ; ಈ ಕುರಿತು ಸರ್ಕಾರದ ನಿಲುವೇನು? (ವಿವರ ನೀಡುವುದು) | |

ಸಂಖ್ಯೆ: ಕಂಇ 87 ಮುಸಪ್ರ 2024

**(ರಾಮಲಿಂಗಾರೆಡ್ಡಿ)**
ಸಾರಿಗೆ ಮತ್ತು ಮುಜರಾಯಿ ಸಚಿವರು